ಇಂದು ದಿನಾಂಕಃ 19.02.2020 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ 1 ಮತ್ತು 3 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅನುಮೋದಿಸಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಅನುವು ಮಾಡಿಕೊಡಲಾಗಿರುತ್ತದೆ.

ಓ ಎಸ್ 97/2000 ರ ದಾವೆಯಲ್ಲಿ ನ್ಯಾಯಾಲಯ ನನ್ನ ತಂದೆ ಮತ್ತು ಚಿಕ್ಕಪ್ಪ ಪ್ರಸ್ತುತ ದಾವೆಯ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದು ನಿರ್ಣಯ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ದಿಃ 10.05.1952 ರಂದು ನನ್ನ ತಾತ ಸಿದ್ದಚಾರ್ ರವರು 25 ಇಂಟು 45 ಅಡಿಯ ಆಸ್ತಿಯನ್ನು ಬೆಟ್ಟಚಾರ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ತಾವು ಖರೀದಿಸಿದ್ದ ಆಸ್ತಿಯನ್ನು ಬೆಟ್ಟಚಾರ್ ರವರು ದಿಃ 10.06.1957 ರಂದು ಪುಟ್ಟಬಸವಚಾರ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಂತರದಲ್ಲಿ ಹೊನ್ನಪ್ಪ ರವರು ಖರೀದಿಸಿದ್ದು ನಂತರ ಸದರಿ ಆಸ್ತಿಯನ್ನು ರಾಜೇಗೌಡರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ನನ್ನ ತಾತನಿಗೆ ಸೇರಿದ್ದು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾರಾಯಣಚಾರ್ ಎಂದರೆ 2 ನೇ ಪ್ರತಿವಾದಿಯ ತಾತ ಎಂದರೆ ಸರಿ. ಸದರಿ ನಾರಾಯಣಚಾರ್ ರವರಿಗೆ ನಾಲ್ಕು ಜನ ಮಕ್ಕಳು ಅವರೆಂದರೆ ಬಿ ಎನ್ ಕಾಳಾಚಾರಿ, ನಾರಾಯಣಚಾರಿ, ಪುಟ್ಟಸ್ವಾಮಾಚಾರ್ ಮತ್ತು ನಾಗರಾಜಚಾರ್ ಎಂದರೆ ಗೊತ್ತಿಲ್ಲ. ಆಸ್ತಿ ಸಂಖ್ಯೆ 31/2 ರ ಪೈಕಿ 17 ಇಂಟು 10 ಗಜ 2 ನೇ ಪ್ರತಿವಾದಿಯ ತಾತ ನಾರಾಯಣಚಾರ್ ರವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಗಂಗಾಧರಚಾರ್ ರವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಭಾಸ್ಕರ್ ರವರ ಖಾಲಿ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. 17 ಇಂಟು 10 ಗಜದ ಆಸ್ತಿಯಲ್ಲಿ ಹಿಂದೆ ಮನೆ ಇತ್ತು ಎಂದರೆ ಸರಿ ಅದು ನಮಗೆ ಸೇರಿರುತ್ತದೆ. ಸದರಿ ಆಸ್ತಿಯನ್ನು ನಾರಾಯಣಚಾರ್ ರವರ ಮೂರು ಜನ ಮಕ್ಕಳು ಇನ್ನೊಬ್ಬ ಸಹೋದರ ಅಂದರೆ 2 ನೇ ಪ್ರತಿವಾದಿಯ ತಂದೆಯಾದ ಕಾಳಚಾರ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕಾಳಚಾರ್ ರವರ ಮರಣನಂತರ 2 ನೇ ಪ್ರತಿವಾದಿ ಮತ್ತು ಅವರ ಸಹೋದರ ಕುಮಾರ್ ರವರು ತಲಾ ಅರ್ಧ ಭಾಗದಂತೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅವರು ಅಕ್ರಮವಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ಹಳೇ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿ ಅದರಲ್ಲಿ

ವಾಸವಾಗಿದ್ದಾರೆ ಎಂದರೆ ಸರಿ, ನಾವು ಗಲಾಟೆ ಮಾಡಿರುತ್ತೇವೆ. 2 ನೇ ಪ್ರತಿವಾದಿ ವಾಸ ಮಾಡುತ್ತಿರುವ ಮನೆಯ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಗಂಗಾಧರಚಾರ್ ವಾಸವಾಗಿರುವ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಕುಮಾರ್ ರವರಿಗೆ ಸೇರಿದ ಅರ್ಧ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ, ಬೆಟ್ಟಚಾರಿಯವರ ಆಸ್ತಿ ಇರುತ್ತದೆ.

ನಾನು ನನ್ನ ಸಹೋದರಿಯರು ಹಾಗೂ ಅತ್ತೆಯವರು ಮೀನಾಬಾಸ್ಕರ್ ರವರಿಗೆ ಆಸ್ತಿಯನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸದರಿ ಕ್ರಯಪತ್ರದ ಷೆಡ್ಯೂಲ್ ನಲ್ಲಿ ಆಸ್ತಿಯ ಉತ್ತರಕ್ಕೆ ಅಣ್ಣಯ್ಯ ಚಾರ್ ರವರ ಮನೆ ಎಂದು ತೋರಿಸಲಾಗಿದೆ ಎಂದರೆ ಸರಿ. 2009 ರಲ್ಲಿ ಯಾರು ಆಸ್ತಿಯನ್ನು ಅಳತೆ ಮಾಡಿಸಿದ್ದಾರೆಂದರೆ ನನ್ನ ತಂದೆ ಮಾಡಿಸಿರುತ್ತಾರೆ ನನಗೆ ಗೊತ್ತಿಲ್ಲ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎನ್ನುತ್ತಾರೆ. ದಾವಾ ಆಸ್ತಿ ಮತ್ತು 2 ನೇ ಪ್ರತಿವಾದಿ ವಾಸಮಾಡುತ್ತಿರುವ ಮನೆ ಎರಡು ಒಂದೇ ಆಸ್ತಿ ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಮಾಡಿದ್ದೇನೆ. ನಾನಾಗಲೀ ನನ್ನ ತಂದೆಯಾಗಲೀ ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಈಗಾಗಲೇ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ದಾವೆಯನ್ನು ಸಲ್ಲಿಸುವ ಕಾಲಕ್ಕೆ ಬಿಳಿಕರೆ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಆಸ್ತಿಗೆ ಚದರ ಮೀಟರಗೆ 2 ಸಾವಿರ ಇತ್ತು ಎಂದರೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಕಟ್ಟಿರುವ ಶುಲ್ಕ ಸಮರ್ಪಕವಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಲ್ಲಿಸಿದ್ದ ಓ ಎಸ್ 97/2000 ಮತ್ತು 272/2009 ದಾವೆಗಳು ವಜಾಗೊಂಡ ನಂತರ ನಾನು ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಸಲ್ಲಿಸಿದ್ದ ಓ ಎಸ್ 97/2000 ದಾವೆಯ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ಚಕ್ಕುಬಂಧಿಯನ್ನು ನೀಡಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಹಕ್ಕು, ಹಿತಾಸಕ್ತಿ, ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.